( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ಅಸಲು ದಾವೆ ನಂ.101/2013**

**ದಿನಾಂಕಃ 09-01-2024, ಪಿ ಡಬ್ಲ್ಯೂ–1**

ಮುಂದುವರೆದ ಪಾಟೀ ಸವಾಲು ಃ ಶ್ರೀ ಆರ್ ಕೆ ಎಂ ವಕೀಲರಿಂದಃ

ನನ್ನ ತಾಯಿಯ ಹೆಸರು ಲಕ್ಷ್ಮಮ್ಮ. ನನ್ನ ತಾಯಿ ಬದುಕಿದ್ದಾರೆ. ನನ್ನ ತಂದೆ ಮರಣ ಹೊಂದಿದಾಗ ನನ್ನ ತಾಯಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ. ನನ್ನ ತಾಯಿ ನನ್ನ ಜೊತೆ ಒಟ್ಟಿಗೆ ಇದ್ದಾರೆ. ನನ್ನ ತಂದೆಯ ಜೊತೆ ಇಬ್ಬರು ಅಣ್ಣತಮ್ಮಂದಿರು ಹುಟ್ಟಿರುತ್ತಾರೆ. ನನ್ನ ಚಿಕ್ಕಪ್ಪ ಈಗ ಮೃತಪಟ್ಟಿರುತ್ತಾರೆ. ನನ್ನ ಚಿಕ್ಕಪ್ಪ ತೀರಿಹೋಗಿ 12 ವರ್ಷಗಳಾಗಿವೆ. ನನ್ನ ತಂದೆ ಬದುಕಿದ್ದಾಗ ನನ್ನ ತಂದೆ ಮತ್ತು ಚಿಕ್ಕಪ್ಪ ಬೇರೆ ಬೇರೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ಮನೆಯಿಂದ ನನ್ನ ಚಿಕ್ಕಮ್ಮನ ಮನೆ ಕಾಲು ಕಿ ಮೀ ದೂರ ಇದೆ. ನನ್ನ ಚಿಕ್ಕಪ್ಪ ಮೃತರಾದ ನಂತರ ನನ್ನ ಚಿಕ್ಕಮ್ಮ ಅವರ ಮಕ್ಕಳ ಜೊತೆ ಅವರು ವಾಸ ಮಾಡುತ್ತಿರುವ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ನನ್ನ ತಂದೆ ಬದುಕಿದ್ದಾಗ ನಾನು ನನ್ನ ತಂದೆ ನನ್ನ ತಾಯಿ ನಮ್ಮ ಮನೆಯಲ್ಲಿ ಒಟ್ಟಿಗೆ ವಾಸ ಮಾಡುತ್ತಿದ್ದೆವು.

ನಾವು ವಾಸ ಮಾಡುತ್ತಿರುವ ಮನೆ ನನ್ನ ತಂದೆಯ ಹಿಸ್ಸೆಗೆ ಬಂದಿದೆ ಎಂದರೆ ಸಾಕ್ಷಿಯು ನನ್ನ ತಂದೆ ಕ್ರಯಕ್ಕೆ ಪಡೆದಿರುತ್ತಾರೆ ಮತ್ತು ಕ್ರಯಕ್ಕೆ ಪಡೆದ ನಂತರ ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಮ್ಮ ವಾಸ ಮಾಡುತ್ತಿರುವ ಮನೆ ನನ್ನ ತಾತನಿಗೆ ಸೇರಿದ ಮನೆಯಾಗಿರುತ್ತದೆ. ನನ್ನ ತಾತನಿಗೆ ಸೇರಿದ ಮನೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ಹಿಸ್ಸೆಗೆ ಬಂದಿದ್ದು ಇಬ್ಬರೂ ವಾಸವಿದ್ದೇವೆ.

6 ನೇ ಪ್ರತಿವಾದಿಯಾದ ರಾಮೇಗೌಡ ನನ್ನ ತಾತನ ತಮ್ಮ ಎಂದರೆ ಸರಿ. 7 ನೇ ಪ್ರತಿವಾದಿ 6 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. 6 ನೇ ಪ್ರತಿವಾದಿ ಕಂದಾಯ ಇಲಾಖೆಯಲ್ಲಿ ನೌಕರಿಯಲ್ಲಿದ್ದರು ಎಂದರೆ ಸರಿ. ನನ್ನ ತಾತ ಬದುಕಿರುವಾಗಲೇ ನನ್ನ ತಾತ ಮತ್ತು 6 ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸ

ಮಾಡುತ್ತಿದ್ದರು ಎಂದರೆ ಸರಿ. 6 ನೇ ಪ್ರತಿವಾದಿ ಹಿಸ್ಸೆಯಾದ ನಂತರ ಚನ್ನರಾಯಪಟ್ಟಣದಲ್ಲಿ ಮನೆ ನಿರ್ಮಾಣ ಮಾಡಿಕೊಂಡು ವಾಸ ಮಾಡುತ್ತಿದ್ದರು ಎಂದರೆ ಸರಿ.

ನನ್ನ ತಾತ ಬದುಕಿದ್ದಾಗ 1 ರಿಂದ 5 ನೇ ಪ್ರತಿವಾದಿಯವರ ವಿರುದ್ಧ ಇದೇ ಅರಕಲಗೂಡಿನ ನ್ಯಾಯಾಲಯದಲ್ಲಿ ಹಿಸ್ಸೆ ಕೋರಿ ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ಸದರಿ ದಾವೆ ನನ್ನ ತಾತನ ಪರವಾಗಿ ಡಿಕ್ರಿ ಆಯಿತು ಎಂದರೆ ಸರಿಯಲ್ಲ. ಸದರಿ ಡಿಕ್ರಿಯ ವಿರುದ್ಧ 1 ರಿಂದ 5 ನೇ ಪ್ರತಿವಾದಿಯರು ಅರಕಲಗೂಡಿನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

ಸರ್ವೆ ನಂ.52 ರಲ್ಲಿ 2 ಎಕರೆ 30 ಗುಂಟೆ ಜಮೀನು ನನ್ನ ತಾತನ ಹಿಸ್ಸಗೆ ಬಂದಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಜಮೀನನ್ನು ನನ್ನ ತಾತ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.15/3 ರಲ್ಲಿ ನನ್ನ ತಾತನ ಹೆಸರಿಗೆ 32 ವರೆ ಗುಂಟೆ ಜಮೀನು ಹಿಸ್ಸೆಗೆ ಬಂದಿತ್ತು ಎಂದರೆ ಸರಿ. ಸರ್ವೆ ನಂಬರ್ 52 ರಲ್ಲಿ ಇರುವ ಮನೆ ನನ್ನ ತಾತನ ಹಿಸ್ಸೆಗೆ ಬಂದಿತ್ತು ಎಂದರೆ ಸಾಕ್ಷಿಯು ನನ್ನ ತಾತ ವಾಸ ಮಾಡುತ್ತಿದ್ದರು, ಆದರೆ ಹಿಸ್ಸೆಯಾಗಿರಲಿಲ್ಲ ಎಂದು ನುಡಿಯುತ್ತಾರೆ.

ನನ್ನ ತಾತನ ಹಿಸ್ಸೆಗೆ ಬಂದಿದ್ದ ಆಸ್ತಿಗಳಲ್ಲಿ ನನ್ನ ತಾತ, ನನ್ನ ತಂದೆ, ನನ್ನ ಚಿಕ್ಕಮ್ಮ ಮತ್ತು ಅವರ ಮಕ್ಕಳ ವಿರುದ್ಧ ಹಿಸ್ಸೆ ಕೋರಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.52 ರಲ್ಲಿ ಒಟ್ಟು 4 ಎಕರೆ 29 ಗುಂಟೆ ಜಮೀನು ಇದೆ ಎಂದರೆ ಸರಿ. ಒಟ್ಟು 4 ಎಕರೆ 29 ಗುಂಟೆ ಪೈಕಿ ನನ್ನ ತಾತನ ಹೆಸರಿಗೆ 2 ಎಕರೆ 30 ಗುಂಟೆ ಜಮೀನು ಹಾಗೂ ಉಳಿಕೆ ಜಮೀನು 6 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿತ್ತು ಎಂದರೆ ಸರಿಯಲ್ಲ.

ದಾವಾ ಐಟಂ ನಂ.1 ರಲ್ಲಿ 1 ಎಕರೆ ತೋಟ ಇದೆ ಎಂದರೆ ಸರಿ. ಸರ್ವೆ ನಂ.52 ರಲ್ಲಿ 1 ಎಕರೆ ತೆಂಗಿನ ತೋಟ ಇದೆ ಎಂದರೆ ಸರಿ. 1 ಎಕರೆ ತೆಂಗಿನ ತೋಟದ ಪೂರ್ವಕ್ಕೆ ಹನ್ಯಾಳು ರುದ್ರಪಟ್ಟಣ ಗ್ರಾಮದ ಮುಖ್ಯ ರಸ್ತೆ, ಪಶ್ಚಿಮಕ್ಕೆ ನನ್ನ ಹಾಗೂ 6 ನೇ ಪ್ರತಿವಾದಿಯ ಬಾಬ್ತು ಜಮೀನು, ಉತ್ತರಕ್ಕೆ ತಿರುಗಾಡುವ ಓಣಿ ಎಂದರೆ ಸರಿ, ದಕ್ಷಿಣಕ್ಕೆ 8 ಮತ್ತು 9 ನೇ ಪ್ರತಿವಾದಿಯರವರ ಬಾಬ್ತು ತೆಂಗಿನ ತೋಟ ಎಂದರೆ ಸರಿಯಲ್ಲ. 8 ಮತ್ತು 9 ನೇ ಪ್ರತಿವಾದಿಯರು ಸದರಿ ತೆಂಗಿನ ತೋಟವನ್ನು 6 ಮತ್ತು 7 ನೇ

ಪ್ರತಿವಾದಿಯರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂರದೆ ಸಾಕ್ಷಿಯು ಮೋಸದಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.

ಸರ್ವೆ ನಂ.52/2 ರಲ್ಲಿ 1 ಎಕರೆ 30 ಗುಂಟೆ ಜಮೀನು ಹಾಗೂ 1 ಎಕರೆ ತೋಟ ನನ್ನ ತಾತನ ಹಿಸ್ಸೆಗೆ ಹೋಗಿತ್ತು ಎಂದರೆ ಸರಿಯಲ್ಲ. ಉಳಿಕೆ ಜಮೀನು 6 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿತ್ತು ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ನೌಕರಿಯಲ್ಲಿದುದ್ದರಿಂದ ಅವರ ಹಿಸ್ಸೆಗೆ ಬಂದ ಜಮೀನನ್ನು 7 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಖಾತೆಯನ್ನು ಪ್ರಶ್ನಿಸಿ ನನ್ನ ತಂದೆ ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿ ನಂ.16/2006-07 ರಂತೆ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯು ವಜಾ ಆಗಿರುವ ವಿಚಾರ ನನಗೆ ಗೊತ್ತಿಲ್ಲ.

ನನ್ನ ತಂದೆ ಬದುಕಿದ್ದಾಗ 6 ಮತ್ತು 7 ನೇ ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಅರಕಲಗೂಡಿನ ನ್ಯಾಯಾಲಯದಲ್ಲಿ ಅಸಲು ದಾವಾ ನಂ.204/2008 ರಂತೆ ದಾವೆಯನ್ನು ಹೂಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾವೆ ವಜಾ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ನನ್ನ ತಂದೆ ಹಾಸನದ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದ ವಿಚಾರ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ವಜಾ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಹಗೂ ನನ್ನ ತಂದೆ ಹೂಡಿದ್ದ ದಾವೆಗಳ ಬಗ್ಗೆ ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ.52/2 ರಲ್ಲಿ 1 ಎಕರೆ 39 ಗುಂಟೆ ಪೈಕಿ 39 ವರೆ ಗುಂಟೆ ಜಮೀನು ಮತ್ತು ಸರ್ವೆ ನಂ.51/6 ರಲ್ಲಿ 1 ಎಕರೆ ಜಮೀನಿನ ಪೈಕಿ 20 ಗುಂಟೆ ಜಮೀನನ್ನು 6 ಮತ್ತು 7 ನೇ ಪ್ರತಿವಾದಿಯರು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ದಾವೆಯನ್ನು ಹೂಡಿದ ನಂತರ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 39 ವರೆ ಗುಂಟೆ ಜಮೀನಿನ ಉತ್ತರಕ್ಕೆ ನನ್ನ ತಂದೆಯ ಹಿಸ್ಸೆಗೆ ಸೇರಿದ ಜಮೀನು ಇದೆ ಎಂದರೆ ಸರಿ.

ಸರ್ವೆ ನಂ.51/6 ರಲ್ಲಿ 1 ಎಕರೆ ಜಮೀನಿನ ಪೈಕಿ 20 ಗುಂಟೆ ಜಮೀನಿನ ಉತ್ತರಕ್ಕೆ 9 ನೇ ಪ್ರತಿವಾದಿಗೆ ಸೇರಿದ 20 ಗುಂಟೆ ಜಮೀನು ಇದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು

ಮೋಸದಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. 9 ನೇ ಪ್ರತಿವಾದಿಗೆ ಸೇರಿದ 20 ಗುಂಟೆ ಜಮೀನಿನ ಉತ್ತರಕ್ಕೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನಿಗೆ ಸೇರಿದ ಹಿಸ್ಸೆಯ ಜಮೀನು ಇರುತ್ತವೆ ಎಂದರೆ ಸರಿ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು